## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 298 (367)

ಸದಸ್ಯರ ಹೆಸರು : ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವವರು : ಮಾನ್ಯ ಕಂದಾಯ, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು

ಉತ್ತರಿಸಬೇಕಾದ ದಿನಾಂಕ : 12.12.2018

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| 1 | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳು ಬರಗಾಲ ಪೀಡಿತ ಜಿಲ್ಲೆಗಳಾಗಿದ್ದು, ಸಾರ್ವಜನಿಕರಿಗೆ ಕುಡಿಯುವ ನೀರು ಹಾಗೂ ದನ ಕರುಗಳಿಗೆ ಮೇವಿನ ಸಮಸ್ಯೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| 2 | ಮೇಲ್ಕಂಡ ಜಿಲ್ಲೆಗಳ ಬರಗಾಲದ ಸಮಸ್ಯೆಯನ್ನು ನಿವಾರಿಸಲು ಸರ್ಕಾರದಿಂದ ಇದುವರೆವಿಗೂ ಬಿಡುಗಡೆಯಾದ ಅನುದಾನ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ಬರ ಪರಿಸ್ಥಿತಿಯಿಂದ ಜಾನುವಾರು ಸಂರಕ್ಷಣೆಗಾಗಿ ತೆಗೆದುಕೊಂಡಿರುವ ವಿವರ ಕೆಳಕಂಡಂತಿದೆ. (ಕೆಳಗಿನ ಕೋಷ್ಟಕಗಳನ್ನು ನೋಡಿ) |
| 3 | ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಜಿಲ್ಲಾಡಳಿತ ಸಮರ್ಪಕವಾಗಿ ನಿರ್ವಹಣೆ ಮಾಡಿದೆಯೇ; (ತಾಲ್ಲೂಕುವಾರು ವಿವರ ನೀಡುವುದು) | |

ಬರ ಪರಿಸ್ಥಿತಿಯಿಂದ ಜಾನುವಾರು ಸಂರಕ್ಷಣೆಗಾಗಿ ತೆಗೆದುಕೊಂಡಿರುವ ವಿವರ ಕೆಳಕಂಡಂತಿದೆ.

| ತಾಲ್ಲೂಕು | ವಿತರಿಸಿದ ಮೇವಿನ ಬೀಜದ ಕಿರು ಪೊಟ್ಟಣಗಳ ಸಂಖ್ಯೆ | ಪ್ರಸ್ತಾಪಿಸಿದ ಗೋಶಾಲೆಗಳ ಸಂಖ್ಯೆ | ಪ್ರಸ್ತಾಪಿಸಿದ ಮೇವಿನ ಬ್ಯಾಂಕ್‌ಗಳ ಸಂಖ್ಯೆ |
|---|---|---|---|
| ಅಫಜಲಪೂರ | 4330 | 2 | 2 |
| ಚಿಂಚೋಳಿ | 4330 | 2 | 2 |
| ಚಿತ್ತಾಪೂರ | 4334 | 2 | 5 |
| ಜೇವರ್ಗಿ | 4329 | 2 | 3 |
| ಕಲಬುರಗಿ | 4329 | 2 | 5 |
| ಸೇಡಂ | 4329 | 2 | 4 |
| ಒಟ್ಟು | 25981 | 12 | 21 |

ತುರ್ತು ಕುಡಿಯುವ ನೀರು ಪೂರೈಕೆಗಾಗಿ ಕೆಳಕಂಡ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.

| ತಾಲ್ಲೂಕು | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ವೆಚ್ಚ (ರೂ. ಲಕ್ಷಗಳಲ್ಲಿ) |
|---|---|---|---|
| ಅಫಜಲಪೂರ | 53 | 64.00 | 9.80 |
| ಆಳಂದ | 15 | 15.75 | 15.67 |
| ಚಿಂಚೋಳಿ | 41 | 65.00 | 14.11 |
| ಚಿತ್ತಾಪೂರ | 44 | 64.00 | 11.75 |
| ಕಲಬುರಗಿ | 33 | 64.00 | 10.63 |
| ಜೇವರ್ಗಿ | 34 | 63.25 | 9.18 |
| ಸೇಡಂ | 113 | 64.00 | 9.20 |
| ಒಟ್ಟು | 333 | 400.00 | 80.34 |

| | | |
|---|---|---|
| | | ಅಫಜಲಪೂರ ಪಟ್ಟಣಕ್ಕೆ ಭೀಮಾ ನದಿಯಲ್ಲಿನ ಜಾಕ್ ವೆಲ್ ಬಳಿ ನಿರ್ಮಿಸಿರುವ ಸ್ಟ್ಯಾಂಡ್ರಿಂಗ್ ಬಂಡ್‌ನಲ್ಲಿ ಶೇಖರಿಸಿ, ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಕಲಬುರಗಿ ನಗರಕ್ಕೆ ಬೆಣ್ಣೆತೋರಾ ಜಲಮೂಲದಿಂದ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಕಲಬುರಗಿ ಜಿಲ್ಲೆಯಲ್ಲಿ 7 ಜನ ವಸತಿಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.<br><br>ಯಾದಗಿರಿ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ.<br><br>ತಾಲ್ಲೂಕು — ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)<br>ಯಾದಗಿರಿ — 20.00<br>ಸುರಪುರ — 20.00<br>ಶೋರಾಪುರ — 20.00<br><br>ಯಾದಿಗಿರಿ ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಅವಶ್ಯಕತೆ ಇರುವ ಮೇವನ್ನು ಖರೀದಿಸಲು ಉಪ ನಿರ್ದೇಶಕರು, ಪಶು ಸಂಗೋಪನೆ ಮತ್ತು ಪಶು ಪಾಲನೆ ಇಲಾಖೆ ಇವರಿಗೆ ರೂ.10.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.<br><br>ಯಾದಿಗಿರಿ ಜಿಲ್ಲೆಯಲ್ಲಿ 12 ಗ್ರಾಮಗಳಿಗೆ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡಲಾಗುತ್ತಿದೆ.<br><br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿನ ಪ್ರತೀ ಬರ ಪೀಡಿತ ತಾಲ್ಲೂಕುಗಳಿಗೆ ರೂ.50.00 ಲಕ್ಷಗಳನ್ನು ಮಂಜೂರು ಮಾಡಲಾಗಿದೆ ಹಾಗೂ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಉದ್ಯೋಗದ ದಿವಸಗಳನ್ನು 100 ದಿನಗಳಿಂದ 150 ದಿನಗಳಿಗೆ ಹೆಚ್ಚಿಸಲಾಗಿದೆ. |

ಕಂಇ 276 ಟಿಎನ್‌ಆರ್ 2018

(ಆರ್.ವಿ. ದೇಶಪಾಂಡೆ)
ಕಂದಾಯ, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು